## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 13-10-2022

### ಮಹಿಳಾ ಪೊಲೀಸ ಠಾಣೆ ಅಪರಾಧ ಸಂಖ್ಯೆ 61/2022 ಕಲಂ 498(ಎ), 323, 504, 506 ಜೊತೆ 34 ಐಪಿಸಿ 3 & 4 ಡಿಪಿ ಎಕ್ಟ್ :-

ಬೀದರ ದಿನಾಂಕ: 12-10-2022 ರಂದು 1630 ಗಂಟೆಗೆ ಫಿರ್ಯಾದಿದಾರಳಾದ ಶ್ರೀಮತಿ ಅಕ್ಷತಾ ಗಂಡ ರವಿಚಂದ್ರ ವಯ: 26 ವರ್ಷ ಉ: ಮನೆ ಕೆಲಸ ಜಾತಿ: ಲಿಂಗಾಯತ ಸಾ: ಮನೆ ನಂ. 4-6-29 ಖಂಡ್ರೆಗಲ್ಲಿ ಭಾಲ್ಕಿ ಸದ್ಯ: ಮನೆ ನಂ. 17-4-267/1 ಗುಂಪಾ ಬೀದರ ಇವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆಂದರೆ ಇವರು ಮದುವೆಯಲ್ಲಿ ವರದಕ್ಷಿಣೆಯಾಗಿ 21 ತೊಲೆ ಬಂಗಾರ, 15 ಲಕ್ಷ ರೂಪಾಯಿ ಕೊಟ್ಟು ರಾಜಶೇಖರ್ ಬಿಚಕುಂದೆ ರವರ ಮಗನಾದ ರವಿಚಂದ್ರ ಇತನ ಜೊತೆಯಲ್ಲಿ ದಿನಾಂಕ 08-12-2019 ರಂದು ಮದುವೆ ಮಾಡಿದ್ದು ಮದುವೆಯಾದ ನಂತರ ಗಂಡನಾದ ರವಿಚಂದ್ರ, ಮಾವನಾದ ರಾಜೇಶೆಖರ್ ಬಿಚಕುಂದೆ, ಅತ್ತೆಯಾದ ರೇಖಾ ರವರು 5 ತಿಂಗಳು ಮಾತ್ರ ಸರಿಯಾಗಿ ನೊಡಿಕೊಂಡಿರುತ್ತಾರೆ. ನಂತರ ಅವರು ನನಗೆ ಸಣ್ಣ ಪುಟ್ಟ ಕಾರಣಕ್ಕಾಗಿ ನೀನು ಸರಿ ಇಲ್ಲ, ನಿಮ್ಮ ತಂದೆಯವರು ನಮ್ಮ ಅಂತಸ್ತಿಗೆ ತಕ್ಕಂತೆ ಏನು ವರದಕ್ಷಿಣೆ ಕೊಟ್ಟಿರುವದಿಲ್ಲ, ನಿನಗೆ ಏನು ಕೆಲಸ ಮಾಡಲು ಬರುವದಿಲ್ಲ, ನೀನೊಬ್ಬ ಮೆಂಟಲ್ ಹೆಣ್ಣಾಗಿರುತ್ತಿ, ನೀನು ಶನಿ ಇದ್ದಿ ನೀನು ದಿನಾಲು ಮುಂಜಾನೆ 4-00 ಗಂಟೆಗೆ ಎದ್ದು ಮನೆಯ ಎಲ್ಲಾ ಕೆಲಸ ಮಾಡಬೇಕು, ನೀನು ಕೇಲಸದವಳು ಇದ್ದಿ, ನೀನು ನಮಗೆ ಸರಿಯಾಗಿ ಒಪ್ಪುವದಿಲ್ಲ, ಎಂದು ಮಾನಸಿಕ ಹಾಗು ದೈಹಿಕವಾಗಿ ಕಿರುಕುಳ ಕೊಡುತ್ತಾ ಬಂದಿರುತ್ತಾರೆ. ಮತ್ತು ಅವರು ನಿಮ್ಮ ಅಪ್ಪನಿಂದ 20 ಲಕ್ಷ ರೂಪಾಯಿ ಮನೆ ಬಳಕೆಯ ಸಾಮಾನುಗಳು ತರುವಂತೆ ಒತ್ತಾಯಿಸಿದರಿಂದ ತಂದೆಯವರು ಅಂದಾಜು 4 ಲಕ್ಷದ ಎಲೆಕ್ಟ್ರಾನಿಕ್ ಸಾಮಾನುಗಳು (ವಾಶಿಂಗ್ ಮಶೀನ್, ಓವನ್, ಟಿವಿ, ಫ್ರಿಡ್ಜ, ವ್ಯಾಕುಮ್ ಕ್ಲಿನರ್, ಮಿಕ್ಸರ್, ಎಲೆಕ್ಟ್ರಿಕ್ ಕುಕ್ಕರ್, ಎಸಿ) ಖರಿದಿ ಮಾಡಿ ಮತ್ತು 4 ತೊಲೆ ಬಂಗಾರ ಕೊಟ್ಟಿರುತ್ತಾರೆ. ಮತ್ತು ಗಂಡ, ಅತ್ತೆ, ಮಾವ ರವರು ಕಾರ ಕೊಡಿಸಲು ಬೇಡಿಕೆ ಇಟ್ಟಿದ್ದರಿಂದ ನನ್ನ ತಂದೆಯವರು ಕಾರ ಖರಿದಿ ಮಾಡಲು 1 ಲಕ್ಷ ರೂಪಾಯಿ, 2 ತೊಲೆ ಬಂಗಾರ ಕೊಟ್ಟಿರುತ್ತಾರೆ. ಆದರೂ ಸಹ ನನ್ನ ಗಂಡ ನನಗೆ ಸ್ಟೀಲ್ ವ್ಯಾಪಾರ ಮಾಡುತ್ತೇನೆ ನಿನ್ನ ತವರು ಮನೆಯಿಂದ 20 ಲಕ್ಷ ರೂಪಾಯಿ ತೆಗೆದುಕೊಂಡು ಬಾ ಇಲ್ಲವಾದರೆ ನನಗೆ ನಿನ್ನ ಮುಖ ತೋರಿಸಬೆಡ ಅಂದಿದ್ದರಿಂದ ಈ ವಿಷಯವನ್ನು ತಂದೆಯಾದ ಹಣಮಂತರಾವ ಪಾಟಿಲ್, ತಮ್ಮನಾದ ಸಾಯಿ ಕಿರಣ, ತಾಯಿಯಾದ ಕಾವೇರಿ, ಸುಶೀಲಾ ಗಂಡ ವಿಶ್ವನಾಥ ರವರಿಗೆ ತಿಳಿಸಿದಾಗ, ತಂದೆ ಮತ್ತು ನಮ್ಮ ಸಂಬಂಧಿಕರಾದ ಮಹೇಶ ವಂಕೆ ಮತ್ತು ರಾಜಕುಮಾರ ವಂಕೆ, ಸುಶೀಲಾ ಹಾಗು ನನ್ನ ತಂದೆಯ ಗೆಳೆಯರು ಗಂಡನ ಮನೆಗೆ ಬಂದು ಪಂಚಾಯಿತಿ ಹಾಕಿ ನೀವು ಕೇಳಿದಷ್ಟು ಹಣ ಬಂಗಾರ ಕೊಟ್ಟಿರುತ್ತೇವೆ ಏಕೆ ಅವಳಿಗೆ ಹಿಂಸೆ ಕೊಡುತ್ತಿರಿ ಸರಿಯಾಗಿ ನಡೆಯಿಸಿಕೊಳ್ಳಿ ಅಂತ ತಿಳಿಸಿ ಹೇಳಿರುತ್ತಾರೆ. ಆಗ ಗಂಡ ಫಿರ್ಯಾದಿಯ ಜೊತೆಯಲ್ಲಿ ಸ್ವಲ್ಪ ದಿವಸ ಸರಿಯಾಗಿ ಇದ್ದು, ಫಿರ್ಯಾದಿಯು ಗರ್ಭಿಣಿ ಆಗಿರುತ್ತಾರೆ ಅದರು ಸಹ ಸುಮ್ಮನೆ ತೊಂದರೆ ಕೋಡುವುದು ಮತ್ತು ಮಾವ ಫಿರ್ಯಾದಿಗೆ ಜೀವಂತ ಇಡುವದಿಲ್ಲ ಅಂತ ಜೀವದ ಬೆದರಿಕೆ ಹಾಕಿರುತ್ತಾನೆ. ದಿನಾಂಕ 23-06-2021 ರಂದು ನನ್ನ ತಂದೆಯವರು ನನಗೆ ಹೆರಿಗೆ ಕುರಿತು ನನ್ನ ತವರು ಮನೆಗೆ ಕರೆದುಕೊಂಡು ಬಂದಿರುತ್ತಾರೆ. ಬೀದರ ಸಿದ್ದಾರೂಢ ಆಸ್ಪತ್ರೆಯಲ್ಲಿ ನನ್ನ ಹೆರಿಗೆಯಾಗಿ ನನಗೆ ಹೆಣ್ಣು ಮಗು ಹುಟ್ಟಿದ್ದು, ಗಂಡ, ಅತ್ತೆ, ಮಾವ ಯಾರು ಸಹ ನೋಡಲು ಬಂದಿರುವದಿಲ್ಲ. ಮಗಳ ಹೆಸರು ಖುಶಿ ಇದ್ದು, ಒಂದು ವರ್ಷದವಳು ಇರುತ್ತಾಳೆ. ನಾನು ಅನೇಕ ಸಾರಿ ನನ್ನ ಗಂಡ ಅತ್ತೆ, ಮಾವ ರವರಿಗೆ ಕರೆದುಕೊಂಡು ಹೋಗಲು ತಿಳಿಸಿದರು ಸಹ ಅವರು ನನಗೆ ಕರೆದುಕೊಂಡು ಹೋಗಿರುವದಿಲ್ಲ. ತವರು

ಮನೆಯಾದ ಗುಂಪಾದಲ್ಲಿ ಉಳಿದುಕೊಂಡಾಗ, ದಿನಾಂಕ 17-09-2022 ರಂದು ಅಂದಾಜು 4-30 ಗಂಟೆಯ ಸುಮಾರಿಗೆ  ಗಂಡನಾದ ರವಿಚಂದ್ರ ಇತನು ನಮ್ಮ ಮನೆಗೆ ಬಂದು ನನಗೆ ನಾನು ಬೇರೆ ಮದುವೆ ಮಾಡಿಕೊಳ್ಳುತ್ತಿದ್ದೇನೆ ನಿನಗೆ ಇಟ್ಟುಕೊಳ್ಳುವದಿಲ್ಲ  ಅವಾಚ್ಯವಾಗಿ ಬೈದು ನಿನಗೆ 20 ಲಕ್ಷ ನಗದು ಹಣ, 10 ತೊಲೆ ಬಂಗಾರ ತೆಗೆದುಕೊಂಡು ಬಾ ಅಂದರೆ ಇಲ್ಲೆ ಉಳಿದುಕೊಂಡಿದ್ದಿ ಅಂತ ಅವಾಚ್ಯ ಶಬ್ದಗಳಿಂದ ಬೈಯ್ದು ನೀನು ಹಣ ಬಂಗಾರ ತರದೆ ಹೋದರೆ ನೀನಗೆ ಜೀವನ ಮಾಡಲು ಬಿಡುವದಿಲ್ಲ ಅಂತ ಜೀವದ ಬೆದರಿಕೆ ಹಾಕಿರುತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.